ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಹಿಲ್ಲೆಗಳೆರಡು ಸೀಡ್ ಫಾರಂಗಳನ್ನು ಮಾಡುತ್ತೇವೆಂತ ಮಂತ್ರಿಗಳು ಹೇಳಿದರು. ಈ ಸೀಡ್ ಫಾರಂಗಳನ್ನು ಪ್ರಾರಂಭಿಸಲು ಸರ್ಕಾರದವರಿಗೆ ಬೇಕಾದ ಸಲಕರಣೆಗಳೇನು ?

Mr. SPEAKER.—The same remark I have to repeat. What is this question ? It is a good point for debate but not for a supplementary.

ಶ್ರೀ ಅಂಗಡಿ ಚನ್ನಬಸಪ್ಪ.—ಈಗ ಮದ್ರಾಸ್ ರಾಜ್ಯದಲ್ಲಿ ಸೀಡ್ ಮಲ್ಟಿಪ್ಲಿಕೇಷ್ನ ಕೋ-ಆಪರೇಟಿವ್ ಸೊಸೈಟಿಗಳೆಂತ ಇವೆ. ಅವು ಅಲ್ಲಿ ಬಹಳ ಚೆನ್ನಾಗಿ ಕೆಲಸಮಾಡುತ್ತಿವೆ. ಆ ತರಹೆ ಇಲ್ಲಿ ಏರ್ಪಾಡು ಮಾಡಲು ಸರ್ಕಾರದವರೇನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ?

ಶ್ರೀ ಜಿ. ನಾರಾಯಣ ಗೌಡ.—ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ನಂಜನಗೂಡು ತಾಲ್ಲೂಕಿನಲ್ಲಿ ಉತ್ತಮ ತರಹ ಬೀಜಗಳನ್ನು ಒದಗಿಸಲು ಈಗ ಸರ್ಕಾರದವರೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಜಿ. ನಾರಾಯಣ ಗೌಡ.—ಮೂರು ಸೀಡ್ ಫಾರಂಗಳನ್ನು ತಯಾರು ಮಾಡಿದ್ದೇವೆ. ಅಲ್ಲಿಂದ ಗ್ರೌಂಡ್ ಸೀಡುಗಳನ್ನು ತಯಾರು ಮಾಡಿ ಮಲ್ಟಿಪ್ಲಯರ್ಸ್‌ಗೆ ಹಂಚುತ್ತೇವೆ. ಅವರು ಆ ಸೀಡ್‌ಗಳನ್ನು ಮಲ್ಟಿಪ್ಲೈ ಮಾಡಿ ಸೊಸೈಟಿಗಳ ಮೂಲಕವಾಗಿಯೋ ಅಥವಾ ಅವರೇ ನೇರವಾಗಿಯೋ ರೈತರಿಗೆ ಹಂಚಿ ಮಾಡುತ್ತಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಸರ್ಕಾರದವರಿಗೆ ಇಷ್ಟೆಲ್ಲಾ ಹೇಳಿದ ಮೇಲೆ ಅಲ್ಲಗೊಂದು ಸೀಡ್ ಫಾರಂ ಕೊಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಈ ಪ್ರಶ್ನೆಗಾಗಲೇ ಉತ್ತರ ಹೇಳಿದ್ದೇನೆ.

Sri N. O. SAMAJI.—(Spoke in Marathi)

Sri B. D. JATTI.—(Spoke in Marathi)

Unfiltered Water supplied to the public at Hole-Narasipur.

*Q.—529. Sri H. D. DEVE GOWDA (Holenarasipur).—

Will the Government be pleased to state :—

(*a*) whether it has come to their notice that the Holenarasipur Municipality is supplying unfiltered water to the public ;

(*b*) whether it has also come to their notice that two filters have gone out of order and that in view of the supply of such unfiltered water from the river, there is a danger of outbreak of contageous diseases during summer ;

(*c*) whether they would take action to supply filtered water to the public ?

*A.—Sri K. PUTTASWAMY (Minister for Municipal Administration).

(*a*) No.

(*b*) No.

(*c*) Does not arise in view of reply to clause (*a*)

ಶ್ರೀ ಎಚ್. ಡಿ. ದೇವೇಗೌಡ.— ಇಲ್ಲಿ (ಎ) ಮತ್ತು (ಬಿ) ಪ್ರಶ್ನೆಗಳಿಗೆ 'ಇಲ್ಲ' ಎಂತ ಉತ್ತರ ಕೊಡಲಾಗಿದೆ. ಅಂದರೆ ಈ ಉತ್ತರವನ್ನು ಈ ಸೆಕ್ರೆಟೇರಿಯೆಟ್ ಪೈಲ್‌ನಲ್ಲಿ ತಯಾರಿಸಲಾಯಿತೋ ಅಥವಾ ಆ ಸ್ಥಳ ಪಾಹಿತಿ ಮೇಲೆ ತಯಾರಿಸಲಾಯಿತೋ ?

Mr. SPEAKER.—That is not a supplementary.

ಶ್ರೀ ಎಚ್. ಡಿ. ದೇವೇಗೌಡ.—ಈ ಇಲಾಖೆಗೆ ಸಂಬಂಧಪಟ್ಟ ಉಪ-ಮಂತ್ರಿಗಳೇ ಹೊಳೆನರಸೀಪುರಕ್ಕೆ ಬಂದಿದ್ದಾಗ್ಗೆ ಅಲ್ಲಿಯ ಪುರಜನರು ಈ ವಿಷಯವನ್ನು ಅವರ ಗಮನಕ್ಕೆ ತಂದಿರುವಕ್ಕೆ ವಿಜಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

†ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ಆ ಉಪ-ಮಂತ್ರಿಗಳು ಸರ್ಕಾರದ ಒಂದು ಅಂಗವೋ ಅಥವಾ ಅಲ್ಲವೋ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಸೂರ್ಯನಾರಾಯಣ ರಾವ್.—ಕುಡಿಯುವ ನೀರಿನ ಸರಬರಾಯಿ ಕೆಲಸ ಸರ್ಕಾರದ್ದೋ ಅಥವಾ ಮುನಿಸಿಪಾಲಿಟಿಯವರದೋ ?

ಶ್ರೀ ಕೆ. ಪುಟ್ಟಸ್ವಾಮಿ.—ಪ್ರಶ್ನೆಯಲ್ಲಿರುವ ಜವಾಬ್ದಾರಿ ಪೌರಸಭೆಯವರ ಮೇಲಿದೆ.

ಶ್ರೀ ಎ. ಎಂ. ದೇವ್.—ಹಿಂದೆಯೂ ಎರಡು ಪ್ರಶ್ನೆಗೂ No-No-ಎಂತ ಹೇಳಿದ್ದರು. ಈಗಲಾದರೂ ಮಾನ್ಯ ಮಂತ್ರಿಗಳು ಈ ವಿಚಾರವನ್ನು ತಿಳಿದುಕೊಂಡಿದ್ದಾರೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಕೇಳಿರತಕ್ಕ ಪ್ರಶ್ನೆಯನ್ನೂ-ಸರ್ಕಾರದವರು ಕೊಟ್ಟಿರತಕ್ಕ ಉತ್ತರವನ್ನೂ ಮಾನ್ಯ ಸದಸ್ಯರು ಚೆನ್ನಾಗಿ ಓದಿ ನೋಡಿದರೆ ಈಗ ಸರ್ಕಾರದವರು ಕೊಟ್ಟಿರತಕ್ಕ ಉತ್ತರವೇ ಸರಿ ಎಂಬುದು ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಈ ಎರಡನ್ನೂ ನಾನು ನಿಧಾನವಾಗೇ ಓದಿದೆನು. ಈಗ ಡೆಪ್ಯುಟಿ ಮಿನಿಷ್ಟರಿಗೆ ಪೌರಸಭೆಯವರು ಕೊಟ್ಟಿರತಕ್ಕ ರೆಪ್ರೆಸೆಂಟೇಷನ್ ಸರ್ಕಾರದವರ ಗಮನಕ್ಕೆ ಬಂದಿಲ್ಲ ಎಂತ ಹೇಳಿದ್ದಾರೆ. ಜೊತೆಗೆ ಈ ಸಭೆಯ ಮಾನ್ಯ ಸದಸ್ಯರು ಕೇಳಿರತಕ್ಕ ವಿಚಾರ ಕೂಡ ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ಮಂತ್ರಿಗಳು ಹೇಳತ್ತಿದ್ದಾರೆ. ಆದ್ದರಿಂದ ಸ್ಥಳ ವಿದ್ಯಮಾನಗಳೇನೆಂಬುದನ್ನು ಪರಿಶೀಲಿಸಲು ಮಾನ್ಯ ಮಂತ್ರಿಗಳನ್ನೀಗ ಹೊಳೇನರಸೀಪುರಕ್ಕೆ ಮಾನ್ಯ ಸದಸ್ಯರು ಕರೆದುಕೊಂಡು ಹೋಗಿ ನೋಡಿ ಬರಬೇಕಾದದ್ದು ಅಗತ್ಯವೆಂತ ಹೇಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹೊಳೇನರಸೀಪುರದ ನೀರಿನ ಸರಬರಾಯಿ ಬಗ್ಗೆ ಮಾನ್ಯ ಸದಸ್ಯರೇನು ಪ್ರಶ್ನೆ ಕಳುಹಿಸಿದ್ದಾರೋ ಅದಕ್ಕೆ ಸರಿಯಾಗಿ ಸರ್ಕಾರದವರಿಗ ಉತ್ತರವನ್ನು ಕೊಟ್ಟಿದ್ದಾರೆ. ಪ್ರಶ್ನೆಗೆ ತಕ್ಕ ಉತ್ತರ ಕೊಡಲಾಗಿದೆ. ಈಗ ಉತ್ತರ ಸರಿಯಾಗಿಲ್ಲವೆಂತ ಆಕ್ಷೇಪಣೆ ಮಾಡಿದರೆ ಅದಕ್ಕೆ ನಾನು ಜವಾಬ್ದಾರನಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಈಗ ಅಲ್ಲಿಯ ಸ್ಥಳ ವಿದ್ಯಾಮಾನನೇನೆಂಬುದನ್ನು ಫೋನ್ ಮೂಲಕ ತರಿಸುತ್ತೇವೆ. ಹೀಗಾದರೆ ಈ ಮಾನ್ಯ ಸಭೆಯ ಸದಸ್ಯರು ಪ್ರಶ್ನೆ ಕಳುಹಿಸಿದ್ದಕ್ಕೇನು ಪ್ರಯೋಜನ ? ಉಪ-ಮಂತ್ರಿಗಳು ಟೂರ್ ಹೋಗುವುದರಿಂದಲಾದರೂ ದೇಶಕ್ಕೇನು ಪ್ರಯೋಜನ ?

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದವರು ಸರ್ಕಾರಕ್ಕೆ ಬೇಕಾದ ಸಾಕಷ್ಟು ಮಾಹಿತಿಗಳನ್ನು ಜವಾಬ್ದಾರಿಯುತರಾದ ಅಧಿಕಾರಿಗಳಿಂದ ತರಿಸಿ ಕೊಂಡು, ಈ ಪ್ರಶ್ನೆಗಳಿಗೆ ಒಂದು ಜವಾಬ್ದಾರಿಯುತವಾದ ರೀತಿಯಲ್ಲಿ ಉತ್ತರವನ್ನು ಒದಗಿಸಿದ್ದೇವೆ. ಹೀಗಿದ್ದಾಗ್ಯೂ ಶ್ರೀ ರೇವಣಸಿದ್ಧಪ್ಪನವರು ಕೇಳಿರತಕ್ಕ ಪ್ರಶ್ನೆಯಲ್ಲಿ ಒಂದು ರೀತಿಯ ಇನ್‌ಸಿನ್ಯುಯೇಷನ್ ಮಾತ್ರ ಅಡಕವಾಗಿದೆಯೇ ವಿನಾ ಮತ್ತೇನೂ ಇಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಪಂಪ್‌ಸೆಟ್ ಮತ್ತು ನೀರನ್ನು ಸರಿಯಾಗಿ ಜನಗಳಿಗೆ ಒದಗಿಸತಕ್ಕ ವ್ಯವಸ್ಥೆ ಬಗ್ಗೆ ಆ ಮುನಿಸಿಪಾಲಿಟಿಯವರು ಅವರ ಕರ್ತವ್ಯವನ್ನು ಸರಿಯಾಗಿ ನಡೆಸುತ್ತಿದ್ದಾರೆಯೇ—ಇಲ್ಲವೇ ಎಂಬುದನ್ನು ನೋಡಿಕೊಳ್ಳಲು ಸರ್ಕಾರದವರೇನು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ ?

Mr. SPEAKER.—That is a hypothetical question.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಜಿಲ್ಲಾಧಿಕಾರಿಗಳು ಪೌರಸಭೆಯವರಿಂದ ತರಿಸಿಕೊಂಡ ರಿಪೋರ್ಟ್‌ನ್ನು ತಮಗೆ ನೇರವಾಗಿ ಕಳುಹಿಸುತ್ತಾರೋ ಅಥವಾ ಆ ಜಿಲ್ಲಾಧಿಕಾರಿಗಳೇ ಈ ಬಗ್ಗೆ ಅವರು ಒಂದು ವರದಿಯನ್ನು ತಮಗೆ ಕಳುಹಿಸುತ್ತಾರೋ ?

Sri K. PUTTASWAMY.—If the Chair permits this question? I have no objection to answer. Government have so many sources to get information and I am stating that the information that is given is obtained from the officers in charge of the work to see that proper water supply is maintained.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಂತ್ರಿಗಳು ಜವಾಬ್ದಾರಿಯುತರಾದ ಅಧಿಕಾರಿಗಳಿಂದ ಉತ್ತರವನ್ನು ತರಿಸಿಕೊಳ್ಳುತ್ತಿದ್ದೇವೆಂತ ಹೇಳಿದರು. ಆ ಅಧಿಕಾರಿಗಳು ಈ ದಿವಸ ಈ ಪ್ರಶ್ನೆಗೆ ಒದಗಿಸಿರತಕ್ಕ ಉತ್ತರ ತಪ್ಪೆಂದು ತೋರಿಸಿ ಕೊಟ್ಟರೆ ಅಂಥವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ? ಈಗ ಅಲ್ಲಿರತಕ್ಕ ಎರಡು ಫಿಲ್ಟರುಗಳು ಅನ್‌ಫಿಲ್ಟರ್ಡ್ ನೀರನ್ನು ಒದಗಿಸುತ್ತಿವೆ ಎಂಬುದಾಗಿ ತಿಳಿದು ಬಂದರೆ ಅಂಥವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ?

Mr. SPEAKER.—Before I permit that question to be put, is the Hon'ble Member sure of it personally ?

Sri H. D. DEVE GOWDA.—Yes, Sir.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿ 2 ಫಿಲ್ಟರುಗಳು ಕೆಲಸ ಮಾಡುತ್ತಿವೆ. ಅವು ಸ್ವಲ್ಪ ಲೀಕಾಗಿರುತ್ತವೆ. ಅವುಗಳನ್ನು ಸರಿಪಡಿಸಲು ಹೊಳೆನರಸೀಪುರದ ಪೌರಸಭೆಯವರು ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದಾರೆ. ಈಗ ಆ ಲೀಕೇಜನ್ನು ಸರಿಪಡಿಸಿದ್ದಾಗಿದೆ. ಇನ್ನು ಎರಡನೇ ಸ್ಟೇಜಿನ ಕೆಲಸ—ಎಂದರೆ Improvement of Water Supply ಕೆಲಸವನ್ನು ಈಗ ಮುಂದುವರಿಸಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನ್ ಫಿಲ್ಟರ್ಡ್ ನೀರನ್ನು ಸರಬರಾಯಿ ಮಾಡಲಾಗುತ್ತಿತ್ತು ಎಂಬ ಅಂಶವನ್ನು ಸರ್ಕಾರದವರು ಒಪ್ಪಿಕೊಂಡ ಹಾಗಾಗಲಿಲ್ಲವೇ ?

(No answer)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಈ ಮಾನ್ಯ ಸಭೆಯ ಸದಸ್ಯರಿಗೂ—ಮಾನ್ಯ ಮಂತ್ರಿಗಳಿಗೂ ಈ ವಿಚಾರದಲ್ಲಿ ಸಾಕಷ್ಟು ಸಾಮರಸ್ಯವಿರುವುದಿಲ್ಲ. ಆದ್ದರಿಂದ ಈಗ ಈ ವಿಚಾರವನ್ನ ಕೂಲಂಕಷವಾಗಿ ಪರಿಶೀಲನೆ ನಡೆಸಲು ಒಂದು ಕಮಿಟಿಯನ್ನು ನೇಮಿಸಿ ಆ ಸಮಿತಿಯವರು ಈ ವಿಚಾರಗಳನ್ನೆಲ್ಲ ಎಕ್ಸೈರ್ ಮಾಡಿ ಅದಕ್ಕೆ ತಕ್ಕ ಉತ್ತರವನ್ನು ತರಿಸುವಂತೆ ಅವಕಾಶ ಕಲ್ಪಿಸಲಾಗುತ್ತದೆಯೆ ?.....

Mr. SPEAKER.—I will seriously consider it.

(Laughter.)

Sri K. P. REVANNA SIDDAPPA.—Thank you very much, Sir.

(Laughter.)

Establishment of an Aluminium Factory near Gokarn in North Kanara District.

*Q—588. Sri S. P. PHAYADE (Ankola).—

Will the Government be pleased to state :—

(*a*) whether it is not a fact that the Government had decided to establish an Aluminium Factory near Gokarn in North Kanara District ;

(*b*) whether they intend changing the site of the Factory to any other locality ;

(*c*) if so, the reason for the same ?

A.—Sri B. D. JATTI (Minister for Finance) [on behalf of SRI K. MALLAPPA (Minister for Industries and Commerce)].—

(*a*) No.

(*b*) Does not arise in view of reply to clause (*a*).

(*c*) Do do

Smt. VASANTALATA V. MIRJANKAR.—Is it not a fact that the Chief Minister while addressing the State Development Council stated that the aluminium factory could be started in North Kanara District ?

1-30 P.M

Mr. SPEAKER.—I think the matter has been explained in the course of the debate on Industries Demand by the Minister for Industries. He